## ಗುತ್ತಿಗೆ ನೇಮಕಾತಿ ಅಧಿಸೂಚನೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಂಗ ಸಂಸ್ಥೆಯಾದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಹಾಗೂ ಇತರೆ ಸಂಬಂಧಿತ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಯೋಜನೆಗಳ ಯಶಸ್ವಿ ಅನುಷ್ಠಾನಕ್ಕಾಗಿ ಗುತ್ತಿಗೆ ಆಧಾರದ ಮೇಲೆ ಖಾಲಿ ಇರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಗುತ್ತಿಗೆ ಅವಧಿಯು ಒಂದು ವರ್ಷದ ಅವಧಿಗೆ ಸೀಮಿತವಾಗಿದ್ದು, ಕಾರ್ಯಕ್ಷಮತೆಯ ಆಧಾರದ ಮುಂದಿನ 2 ವರ್ಷಗಳ ಅವಧಿಗೆ ವಿಸ್ತರಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **03-02-2022** ಆಗಿರುತ್ತದೆ. ಹುದ್ದೆಗೆ ಸಂಬಂಧಿಸಿದ ವಿವರಗಳು ಈ ಕೆಳಕಂಡಂತಿರುತ್ತದೆ.

| S. N | Post Name | No. of Post | Qualification | Experience | Salary per month (In Rs.) |
|---|---|---|---|---|---|
| 1. | Executive (Doctor)<br>Empanelment coordinator | 1 | MBBS/BDS, preference will be given to candidates with MPH | Minimum 5 years of experience with adequate computer Knowledge. | 50,000/- |
| 2. | Executive (Doctor)<br>Organ Transplant | 1 | MBBS/BDS | Minimum 3 years' experience in Medical field and should have qualities of team leaders with adequate computer knowledge. | 45,000/- |
| 3. | Executive (Doctor)<br>Jyothi Sanjeevini Scheme | 1 | MBBS/BDS | Minimum 3 years' experience in Medical field and should have qualities of team leaders with adequate computer knowledge. | MBBS-50,000/-<br>BDS-45,000/- |
| 4. | Executive (Doctor)<br>Category 2A Claims | 3 | MBBS/BDS | Minimum 3 years' experience in Medical field and with adequate computer knowledge. | MBBS-50,000/-<br>BDS-45,000/- |
| 5. | Executive (Doctor)<br>Reimbursement Section | 2 | MBBS/BDS | Minimum 3 years' experience in Medical field and with adequate computer knowledge. | MBBS-50,000/-<br>BDS-45,000/- |
| 6. | Manager HR | 1 | Any post graduate Degree/MBA(HRD) | Minimum 10 years experience or MBA (HRD) and experience in administration. Preference will be given to candidates who served in government sector and with knowledge of KCSR , Labour rules , procurement, statutory rules etc. | 45,000/- |

| | | | | | |
|---|---|---|---|---|---|
| 7. | Project Manager IT | 1 | BE/MCA (Computer science and /information science will be preferred). | 12 years experience in IT field and 2 years experience on software development like NET and SQL server. | 75,000/ |
| 8. | Team Leaders (Doctors) | 1 | MBBS Preference to PG | Minimum 10 years' experience in clinical field. | 60,000/- |
| 9. | Team Leaders (Doctors) | 9 | MBBS with PG<br>OR<br>BDS | Minimum 7 years' experience in clinical field. | 60,000/- |
| 10. | Programmer/ Developer | 1 | BE/MCA (Computer science and /information science/Electronics will be preferred) | Minimum 5 years experience. Hands on software Developer with strong background in database development, experience writing stored procedures in SQL/MySQL. Business logic development in C#/PHP and front end using Web forms. Candidates should be able to design and develop web applications. experience in Healthcare Domain. | 55,000/- |
| 11. | IT Executive | 2 | BE(CS/IS/Electronics)<br>OR<br>B.Sc.(CS)/BCA/Diploma in CS | Minimum 3 years of experience<br>OR<br>B.Sc. (CS)/BCA/Diploma in CS with minimum 5 years of experience. | 40,000/- |
| 12. | Preauth Cancellation (Doctor) | 1 | MBBS/BDS | Minimum 3 years of experience. | MBBS-50,000/-<br>BDS-45,000/- |
| 13. | Regional consultant (Drs)<br>1.Mysore<br>2. Belagavi<br>3. Bangalore | 3 | MBBS/PG with minimum 15 years of experience in medical field. Preference will be given to regional candidates. | Relevant 10 years of experience. | 60,000/- |
| 14. | Assistant Regional consultant (Drs)<br>1. Chamarajanagar<br>2. Davanagere<br>3. Vijayapura | 3 | MBBS<br>OR<br>BDS | Relevant 5 years of experience, preference to those who have added MPH | MBBS-50,000/-<br>BDS-45,000/- |

| | | | | | |
|---|---|---|---|---|---|
| | District Coordinator<br>1. Chikkamagalore<br>2. Kodagu | 2 | MBBS/BDS/MPH | 3 years experience in relevant field. | MBBS-50,000/-<br>BDS-45,000/- |
| 16. | IEC Consultant | 1 | PG in Mass Communication / Journalism from a Recognized University. | Minimum 3 years experience in Designing, Developing & execution of advocacy activities and Supervision and Monitoring of IEC Activities. | 55,000/- |
| 17. | Data Analyst (M&E) | 1 | PG or equivalent in public health, social science, public administration, management or other related field. The graduate or post graduate degree should preferably include credits in the principles and practice of monitoring and evaluation. | 3 years of professional experience in health and/or social sciences monitoring and evaluation, including periodic updating of technical skills. | 60,000/- |

1. <u>ನೇಮಕಾತಿ:</u>

ಅಭ್ಯರ್ಥಿಯು ಹುದ್ದೆಗೆ ಅರ್ಜಿ ಸಲ್ಲಿಸುವಾಗ ಅರ್ಜಿಯ ಜೊತೆಗೆ ಇ-ಮೇಲ್‌ನಲ್ಲಿ ಈ ಕೆಳಗಿನ ಎಲ್ಲಾ ದಾಖಲಾತಿಗಳ ಪ್ರತಿಯನ್ನು ಕಡ್ಡಾಯವಾಗಿ **Upload** ಮಾಡುವುದು.

1. ಅಭ್ಯರ್ಥಿಯ ಸ್ವಯಂ ವಿವರವನ್ನು ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ಭಾವಚಿತ್ರವನ್ನು ಲಗತ್ತಿಸುವುದು.
2. ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರ, ಪದವಿ ಹಾಗೂ ಸ್ನಾತಕೋತ್ತರ ಪದವಿಯ ಎಲ್ಲಾ ಅಂಕಪಟ್ಟಿಗಳನ್ನು ಸ್ವಯಂ ದೃಢೀಕರಿಸುವುದು.
3. ಅನುಭವ ಪ್ರಮಾಣ ಪತ್ರಗಳ ಪ್ರತಿಯನ್ನು ಸಂಬಂಧಿಸಿದ ಸಂಸ್ಥೆಗಳಿಂದ ಪಡೆದು ಸ್ವಯಂ ದೃಢೀಕರಿಸುವುದು.
4. ಅಭ್ಯರ್ಥಿಯ ಗುರುತಿನ ಪುರಾವೆ(ಆಧಾರ ಕಾರ್ಡ್/ವೋಟರ್ ಐಡಿ/ಡ್ರೈವಿಂಗ್ ಲೈಸೆನ್ಸ್ ಇತ್ಯಾದಿ.)
5. ಸಲ್ಲಿಸಿರುವ ಎಲ್ಲಾ ದಾಖಲಾತಿಗಳ 1 ಜೆರಾಕ್ಸ್ ಪ್ರತಿ ಹಾಗೂ 2 ಭಾವಚಿತ್ರಗಳನ್ನು ಸಂದರ್ಶನದ ಸಮಯದಲ್ಲಿ ಸಲ್ಲಿಸುವುದು ಹಾಗೂ ಮೂಲ ದಾಖಲಾತಿಗಳನ್ನು (Original Documents) ಪರಿಶೀಲನೆಗಾಗಿ ಸಲ್ಲಿಸುವುದು.
6. ಸಂದರ್ಶನದ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ಕಂಪ್ಯೂಟರ್ ಪರೀಕ್ಷೆಯನ್ನು ನಡೆಸಲಾಗುವುದು.
7. ಸಂದರ್ಶನಕ್ಕೆ ಆಹ್ವಾನಿಸಿದಲ್ಲಿ ಅಭ್ಯರ್ಥಿಯು ತಮ್ಮ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು.
8. ಇ-ಮೇಲ್ ಮೂಲಕ ಸ್ವೀಕೃತವಾದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
9. ಅರ್ಜಿ ನಮೂನೆ ಹಾಗೂ ಹುದ್ದೆಗಳ ಹೆಚ್ಚಿನ ವಿವರಗಳಿಗಾಗಿ ಕಛೇರಿ ವೆಬ್‌ಸೈಟ್ http://arogya.karnataka.gov.in/sast/ ನಲ್ಲಿ ವೀಕ್ಷಿಸಬಹುದಾಗಿದೆ.

2. <u>ಷರತ್ತು ಮತ್ತು ನಿಬಂಧನೆಗಳು:</u>

1. ಸ್ವೀಕೃತವಾದ ಅರ್ಜಿಗಳಲ್ಲಿ ಜೇಷ್ಠತೆಯ ಆಧಾರ ಮತ್ತು 1:3 ಅನುಪಾತ ಮೇಲೆ ಅರ್ಹ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಆಹ್ವಾನಿಸಲಾಗುವುದು.
2. ಹುದ್ದೆಗೆ ನಿಗಧಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ ಮತ್ತು ಅನುಭವ ಇಲ್ಲದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದಿಲ್ಲ.
3. ಅಭ್ಯರ್ಥಿಗಳು ಹುದ್ದೆಗೆ ನಿಗದಿಪಡಿಸಿದ ಸೇವಾ ಅನುಭವವನ್ನು ಹೊಂದಿರತಕ್ಕದ್ದು.
4. ಅಭ್ಯರ್ಥಿಗಳು ಕಡ್ಡಾಯವಾಗಿ ಕನ್ನಡ ಜ್ಞಾನವನ್ನು (ಓದಲು ಮತ್ತು ಬರೆಯಲು) ಹೊಂದಿರತಕ್ಕದ್ದು.
5. ಆರೋಗ್ಯ ಹಾಗೂ ಸರಕಾರಿ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿರುವ ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.
6. ಸಂದರ್ಶನವನ್ನು Online /Offline ಮುಖಾಂತರ ನಡೆಸಲಾಗುವುದು.

3. <u>ಹಕ್ಕುತ್ಯಾಗ:</u>

1. ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸಿದ ಅಥವಾ ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಉದ್ಯೋಗ ಹಕ್ಕನ್ನು ಪಡೆಯಲು ಅರ್ಹರಾಗುವುದಿಲ್ಲ.
2. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೇ ಯಾವುದೇ ಹಂತದಲ್ಲಿ ಹಿಂದಕ್ಕೆ ಪಡೆಯುವ/ರದ್ದು ಪಡಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರವು ಹೊಂದಿರುತ್ತದೆ.
3. ಅಭ್ಯರ್ಥಿಗಳ ಪರವಾಗಿ ಅಥವಾ ಆಯ್ಕೆ /ನೇಮಕಾತಿಗೆ ಸಂಬಂಧಿಸಿದಂತೆ ರಾಜಕೀಯ ಅಥವಾ ಇತರ ಹೊರಗಿನ ಪ್ರಭಾವವನ್ನು ತರಲು ಯಾವುದೇ ಅವಕಾಶವಿರುವುದಿಲ್ಲ. ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
4. ಸುಳ್ಳು ಅಥವಾ ತಪ್ಪಾದ ಮಾಹಿತಿಗಳನ್ನು ನೇಮಕಾತಿ ಉದ್ದೇಶಕ್ಕಾಗಿ ಬಳಸಿದ್ದಲ್ಲಿ ಅಂತಹ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳದೇ ತಿರಸ್ಕರಿಸಲಾಗುವುದು ಹಾಗೂ ಅವರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.

ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿಮಾಡಿ ಎಲ್ಲಾ ದಾಖಲಾತಿಗಳೊಂದಿಗೆ <u>estsast@gmail.com</u> ಇ-ಮೇಲ್ ಐಡಿಗೆ (ಎಲ್ಲಾ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಒಂದೇ PDF Formatನಲ್ಲಿ ಸಲ್ಲಿಸುವುದು) ದಿನಾಂಕ: 03-02-2022ರ ಸಂಜೆ 5.30ರೊಳಗೆ ಸಲ್ಲಿಸಲು ಸೂಚಿಸಿದೆ. ನಂತರ ಸ್ವೀಕೃತವಾದ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಕಾರ್ಯಕಾರಿ ನಿರ್ದೇಶಕರು,
ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್,
ಬೆಂಗಳೂರು.